ಇಜಾರೆದಾರನು ಅದರಿಂದ ಸಂಭವಿಸುವ ಲುಕ್ಸಾನಿಗೆ ಗುರಿಯಾಗತಕ್ಕದ್ದು.

6. ಇಜಾರೆಮಾಡಿಕೊಳ್ಳಲು ಅಪೇಕ್ಷಿಸುವ ಜನಗಳಿಗೆ ಯಾವದಾದರೂ ಸಂಗತಿಗಳು ತಿಳಿಯಬೇಕಾಗಿದ್ದರೆ, ಅವರು ಹರಾಜ್ ತಾರೀಖಿಗೆ ಮದಲು ಸೂಪರಿಂಟೆಂಡೆಂಟರ ಆಫೀಸಿನೊಳಗೆ ರೂಬರೂ ಕೇಳಿದಲ್ಲಿ, ಫಾರೆಸ್ಟು ಸೂಪರಿಂಟೆಂಡೆಂಟರು ತಿಳಿಸುವರು.

ಕೆ. ಇ. ಯಂ. ರಸಲ್, ಎಂ. ಆರ್. ಸಿ.,
ಫಾರೆಸ್ಟ್ ವ ಗವರ್ನ್‌ಮೆಂಟ್ ಫಾರಂಗಳ ಸೂಪರಿಂಟೆಂಡೆಂಟ್

ತಾರೀಖು 10ನೇ ಏಪ್ರೆಲ್ 1885.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನು ಕ್ರಮವಾದ ವಾರಸುದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆಗೆ ನಾಶಮಾಡಲ್ಪಡುತ್ತೆ.

ನಂಬರ.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
44 1882—83	ಮೈಸೂರು ಬಸವನಮಹಲ್ಲಾದಲ್ಲಿರುವ ಶ್ರೀರಂಗಪಟ್ಣದ ಮುನಿಸಿಫ್ ಕೋರ್ಟುದಫೆದಾರ ಕ್ರಿಷ್ಣಗಿರಿ ಗೋಸಾಯಿ	ಮೈಸೂರು ಬಸವನಮಹಲ್ಲಾದಲ್ಲಿರುವ ಛಾಲು ಕಚೇರಿ ವಾಲೀಕಾರ ಶಿತಾರಾಂಸಿಂಗ್	19—4—82	19—4—82	23 ರೂಪಾಯಿನ ಖಾಲಿ ಜಮೀನಿನ ಕ್ರಯಪತ್ರ.
489 1882—83	ಮೈಸೂರು ಲಷ್ಕರ್ ಮಹಲ್ಲಾದಲ್ಲಿರುವ ಗುಲಾಂಮಹಮ್ಮದ್ ಸಾಹೇಬರ ಹೆಂಡತಿ ಅಜಬಿ	ಮೈಸೂರು ಲಷ್ಕರ್ ಮಹಲ್ಲಾದಲ್ಲಿರುವ ಮಹಮ್ಮದ್ ಷರೀಫ್ ವುರಫ್ ಬನೆಬಾ	24—10—82	14—11—82	150 ರೂಪಾಯಿನ ಮನೆ ಕ್ರಯ ದಸ್ತಾವೇಜು.
528 1882—83	ಮೈಸೂರು ಮಂಡಿಮಹಲ್ಲಾದಲ್ಲಿರುವ ಸ್ಯೆಯದ್‌ಮಹಮ್ಮದ್ ಹುಸೇನಿ ವುರಫ್ ಸಾಹೆಬ್ಜಾ	ಮೈಸೂರು ಮಂಡಿಮಹಲ್ಲಾದಲ್ಲಿರುವ ಸ್ಯೆಯದ್ ರಹಮತುಲ್ಲಾ ಹುಸೇನಿ	13-11-82	20-11-82	400 ರೂಪಾಯಿನ ಜಮೀನು ಆಧಾರ ದಸ್ತೈವಜು.
613 1882—83	ಮೈಸೂರು ಮಂಡಿಮಹಲ್ಲಾದಲ್ಲಿರುವ ಗಂಗಡಿಕಾರ ಬಸವಂಣ 1, ದೊಳ್ಳೇಗೌಡ 1, ಬಸವಂಣ 1, ಈ ಮೂರು ಜನ	ಮೈಸೂರು ಬಸವನಮಹಲ್ಲಾದಲ್ಲಿರುವ ಚಂದ್ರಗಿ ಅಪ್ಪಾವುಶೆಟ್ಟಿ	29—11—82	4—12—82	160 ರೂಪಾಯಿನ ಜಮೀನ್ ಕ್ರಯಪತ್ರ.
635 1882—83	ಮೈಸೂರು ಮಂಡಿಮಹಲ್ಲಾದಲ್ಲಿರುವ ಲಾಷರ ನರಸಂಣ 1 ಚಿಕ್ಕನರಸಂಣ 1 ಸಹಾ	ಮೈಸೂರು ದೇವರಾಜ ಮಹಲ್ಲಾದಲ್ಲಿರುವ ಸಾಹುಕಾರ ಚಿಕ್ಕ ಮುದ್ದಂಣನ ಮಗ ಚಿಕ್ಕ ಮಾದಂಣ	5—12—82	8—12—82	500 ರೂಪಾಯಿನ ಜಮೀನ್ ಆಧಾರ ಪತ್ರ.

ನಂ. 2.

ತಾರೀಖು 24ನೇ ಏಪ್ರೆಲ್ 1885.

ಹೆಗ್ಗಡದೇವನಕೋಟೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸುವ ದಸ್ತೈವಜನ್ನು ಕ್ರಮವಾದ ವಾರಸದಾರನಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆಗೆ ನಾಶಮಾಡಲ್ಪಡುತ್ತೆ.

ನಂಬರ.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತು.
81 82—83	ಹೆಗ್ಗಡದೇವನಕೋಟೆ ತಾಲ್ಲೂಕು ಮಟ್ಕೆರೆಲಿರುವ ತೆಲಗುಬಣಜಿಗರ ಜಾತಿಸೂಳೇರ ತಿಮ್ಮನ ಮಗ ವೆಂಕಟರಮಣ.	ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿನಲ್ಲಿ ಇರುವ ತೆಲಗುಬಣಜಿಗರ ಜಾತಿ ಕಾಳಮ್ಮನ ಮಗ ಪೋಲಿಸ್‌ಜವಾನ ವೆಂಕಟರಾಮಯ್ಯ	12—1—83	12—1—83	(50) ರೂಪಾಯಿನ ಜಮೀನ್ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 17ನೇ ಏಪ್ರೈಲ್ 1885.

ಇದರಿಂದ ಪ್ರಕಟಿಸಲ್ಪಡುವದೇನಂದರೆ; ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತೀ ಬಾಬತು ಇದರಡಿ ಕಂಡ ನಾಟಾಗಳು ಫಾರೆಸ್ಟು ಅಸಿಸ್ಟೆಂಟ್ ಕನ್ಸರ್‌ವೇಟರವರಿಂದ ಈ ಕೆಳಗೆ ನಮೂದಾದ ಸ್ಥಳಗಳಲ್ಲೂ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ಹರಾಜು ನಡಿಯತಕ್ಕ ಸ್ಥಳ.	ಹರಾಜು ತಾರೀಖು.	ತೇಗದ ನಾಟಾಗಳು.	ಕಾಡಜಾತಿ ನಾಟಾಗಳು.	ತೇಗ ಮತ್ತು ಕಾಡುಮರದ ಪೋಲ್‌ಗಳು.	ಜಮಾ.
ಲಕ್ಕವಳ್ಳಿ ..	26ನೇ ಮೇ 1885	1,000	500	100	1,600
ಕಣಬೂರು ..	1ನೇ ಜೂನ್ ಡಿಟೋ	600	400	0	1,000
ಆಯನೂರು ..	6ನೇ ಜೂನ್ ಡಿಟೋ	50	150	250	450
ಶಿವಮೊಗ್ಗಾ ..	10ನೇ ಜೂನ್ ಡಿಟೋ	200	300	350	850

ಹರಾಜಿನ ಷರತ್ತುಗಳು—ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂನ್ 12ನೇ ಮಾರ್ಕೂಂ 20ನೇ ನಂಬರ ಇಸ್ತಿಹಾರನಾಮೆಯಲ್ಲಿ ಕಂಡ ಪ್ರಕಾರ ಇರತಕ್ಕವು, ಮತ್ತು ಹರಾಜು ಕಾಲದಲ್ಲಿ ಓದಲ್ಪಡುವವು.

ಇ. ಪಿ. ಲವರೀ,
ಫಾರೆಸ್ಟ್ ಅ॥ ಕನ್ಸರ್‌ವೇಟರ.

ಸನ್ 1885ನೇ ಇಸವಿ ಮಾರ್ಚಿ ತಿಂಗಳ ಕಾಲಸ್ಥಿತಿ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ—ಬೆಂಗಳೂರು ಹೆಡ್ ಕ್ವಾಟರಸ್ಸಿನಲ್ಲಿ 70 ಸೆಂಟ್ಸ್ ಮಳೆ ಅಳೆಯಲ್ಪಟ್ಟಿರುತ್ತೆ. ಡಿಸ್ಟ್ರಿಕ್ಟು ಮುಳ್ಳೆ ಸಾಧಾರಣವಾಗಿ ಸ್ವಲ್ಪ ಮಳೆ ಆಗಿರುತ್ತೆ.